ಅನೇಕ ಸವಲತ್ತುಗಳನ್ನು ನೀಡಲಾಗಿದೆ.

ಇ) ಬೆಳಗಾವಿ ಜಿಲ್ಲೆಯಲ್ಲಿ ದಿನಾಂಕ:31-12-2001ರಲ್ಲಿದ್ದಂತೆ 25,945 ಚಿಕ್ಕ ಕೈಗಾರಿಕೆಗಳು ಸ್ಥಾಪನೆಯಾಗಿರುತ್ತದೆ. ಟೆಕ್ಸಾಕ್ ಮಾದರಿ ಸಮೀಕ್ಷೆ ವರದಿಯಂತೆ ಶೇಕಡ 29.7 ಘಟಕಗಳು ಅಂದರೆ 7705 ಘಟಕಗಳು ಮುಚ್ಚಲ್ಪಟ್ಟಿವೆ.(ತಾಲ್ಲೂಕುವಾರು ಮಾಹಿತಿ ಇರುವುದಿಲ್ಲ)

ಸಕ್ಕರೆ ನಿರ್ದೇಶನಾಲಯ ಕಛೇರಿಯನ್ನು ಸ್ಥಳಾಂತರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 407(409)

ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ)

ಉತ್ತರಿಸುವ ಸಚಿವರು : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಪ್ರಶ್ನೆ

ಅ. ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಇರುತ್ತವೆ? ಜಿಲ್ಲಾವಾರು ಮಾಹಿತಿ ನೀಡುವುದು?

ಆ. ಉತ್ತರ ಕರ್ನಾಟಕದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಇರುತ್ತವೆ. ಹಳೆಯ ಮೈಸೂರು ಭಾಗದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಇರುತ್ತವೆ?

ಇ. ಬೆಳಗಾವಿಯಲ್ಲಿ ಸಕ್ಕರೆ ನಿರ್ದೇಶನಾಲಯದ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರ ಎಂದು ಆದೇಶವನ್ನು ಹೊರಡಿಸಿತು? ಸರ್ಕಾರದ ಆಜ್ಞೆ ಅನುಷ್ಠಾನಕ್ಕೆ ಬಂದಿದೆಯೇ? ಹಾಗೂ ಎಂದಿನಿಂದ ಈ ಕಛೇರಿ ಕೆಲಸವನ್ನು ನಿರ್ವಹಿಸುತ್ತಿದೆ?

ಈ. ಈ ಕಛೇರಿಯು ಯಾರಿಂದ, ಎಲ್ಲಿ ಮತ್ತು ಯಾವಾಗ ಉದ್ಘಾಟಿಸಲ್ಪಟ್ಟಿತ್ತು?

ಉ. ಕಛೇರಿಯು ಬೆಳಗಾವಿಯಲ್ಲಿ ಉದ್ಘಾಟನೆಯಾಗಲ್ಪಟ್ಟಿದ್ದರೂ ಕೂಡ ಇದುವರೆಗೂ ಕೆಲಸ ಮಾಡದೇ ಇರುವ ಸಂಗತಿ ನಿಜವೇ?

ಊ. ಉತ್ತರ ಕರ್ನಾಟಕದ ಬಗ್ಗೆ ನಿರ್ಲಕ್ಷ್ಯ ಮನೋಭಾವನೆ ಹೊಂದಿರುವ ಬೆಂಗಳೂರು ವ್ಯಾಮೋಹಿ ಕೆಲವು ಐ.ಎ.ಎಸ್. ಅಧಿಕಾರಿಗಳ ಅಸೂಯೆ ಭಾವನೆಯಿಂದ ಇಲ್ಲಿ ಆರಂಭಗೊಂಡಿರುವ ಸಕ್ಕರೆ ನಿರ್ದೇಶನಾಲಯದ ಕಛೇರಿಯನ್ನು ಇಲ್ಲಿ ಕೆಲಸ

ಮಾಡದಂತೆ ನೋಡುತ್ತಿರುವ ಸಂಗತಿ ನಿಜವೇ?

ಋ. ಈ ಕಛೇರಿಗೆ ಸರ್ಕಾರದವರು ಪ್ರತಿ ತಿಂಗಳು ಎಷ್ಟು ಹಣ ವೆಚ್ಚ ಮಾಡುತ್ತಿರುವರು?

ಉತ್ತರ

ಅ. ರಾಜ್ಯದಲ್ಲಿ ಒಟ್ಟು 38 ಸಕ್ಕರೆ ಕಾರ್ಖಾನೆಗಳು ಇರುತ್ತವೆ. ಜಿಲ್ಲಾವಾರು ಮಾಹಿತಿ ಕೆಳಕಂಡಂತೆ ಇರುತ್ತದೆ:

1)	ದಾವಣಗೆರೆ ಜಿಲ್ಲೆ	- 3
2)	ಬೆಳಗಾವಿ "	- 10
3)	ಬೀದರ್ "	- 1
4)	ಉಡುಪಿ "	- 1
5)	ಹಾಸನ "	- 1
6)	ಬಿಜಾಪುರ "	- 1
7)	ಮಂಡ್ಯ "	- 4
8)	ಹಾವೇರಿ "	- 1
9)	ಬಾಗಲಕೋಟೆ	- 5
10)	ಗುಲ್ಬರ್ಗಾ	- 1
11)	ಮೈಸೂರು	- 2
12)	ಚಿತ್ರದುರ್ಗ	- 1
13)	ಶಿವಮೊಗ್ಗ	- 1
14)	ಕೊಪ್ಪಳ	- 1
15)	ಬಳ್ಳಾರಿ	- 3

16) ಚಾಮರಾಜನಗರ - 1

17) ಕೋಲಾರ - 1

ಆ. ಉತ್ತರ ಕರ್ನಾಟಕದಲ್ಲಿ 23 ಸಕ್ಕರೆ ಕಾರ್ಖಾನೆಗಳು ಇರುತ್ತವೆ (ಬೆಳಗಾಂ ಮತ್ತು ಗುಲ್ಬರ್ಗಾ ವಿಭಾಗಗಳಲ್ಲಿ) ಹಳೆಯ ಮೈಸೂರು ಭಾಗದಲ್ಲಿ 15 ಸಕ್ಕರೆ ಕಾರ್ಖಾನೆಗಳು ಇರುತ್ತವೆ. (ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ)

ಇ. ಸರ್ಕಾರ ದಿ: 3-2-2001ರಲ್ಲಿ ಆದೇಶ ಹೊರಡಿಸಿತು.

ಇಲ್ಲ ಉದ್ಭವಿಸುವುದಿಲ್ಲ

ಈ. ಬೆಳಗಾವಿಯ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಕಟ್ಟಡದಲ್ಲಿ ಸಕ್ಕರೆ ನಿರ್ದೇಶನಾಲಯದ ಉದ್ದೇಶಿತ ಕಛೇರಿಯು ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರಿಂದ ದಿ:21-2-2001ರಂದು ಉದ್ಘಾಟಿಸಲ್ಪಟ್ಟಿತ್ತು.

ಉ. ನಿಜ.

ಊ. ನಿಜವಲ್ಲ

ಋ. ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾವಿಗೆ ಸ್ಥಳಾಂತರಿಸಲು ಸರ್ಕಾರ ಆದೇಶಿಸಿದ ಹಿನ್ನೆಲೆಯಲ್ಲಿ ಕಛೇರಿಯ ಸ್ಥಾಪನೆಗೋಸ್ಕರ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಕಟ್ಟಡದ ಮೊದಲನೇ ಮಹಡಿಯ ಜಾಗವನ್ನು ತಿಂಗಳಿಗೆ ರೂ.16,800-00 ಬಾಡಿಗೆ ಕರಾರಿನ ಮೇಲೆ ತೆಗೆದುಕೊಳ್ಳಲು ಉದ್ದೇಶಿಸಲಾಗಿತ್ತು. ಈ ಬಾಬ್ತು ಬ್ಯಾಂಕಿಗೆ 2001ರ ಮೇ ಮಾಹೆಯಿಂದ ತಿಂಗಳಿಗೆ ರೂ.16,800-00ರಂತೆ ಬಾಡಿಗೆ ಪಾವತಿಸಬೇಕಾಗುವುದು.

ಕೈ ಮಗ್ಗ ಅಭಿವೃದ್ಧಿ ನಿಗಮದ ಕಛೇರಿಯನ್ನು ಸ್ಥಳಾಂತರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 408(411)

ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ)

ಉತ್ತರಿಸುವ ಸಚಿವರು : ಶ್ರೀ ಎಂ. ಮಹದೇವ್(ರೇಷ್ಮೆ ಮತ್ತು ಜವಳಿ ಸಚಿವರು)